**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC 176/2016** **PW- 3**

ದಿಃ **03.12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಎದುರುದಾರ ಪರ ವಕೀಲರಾದ ಶ್ರೀ ಎಮ್ ಎಸ್ ಬಿ ರವರಿಂದಃ**

ದವಾಖಾನೆಗೆ ಹೋದಾಗ ವೈದ್ಯರು ರೋಗಿಗೆ ಹೇಗೆ ಆಯಿತು ಏನು ಆಯಿತು ಎಂದು ಕೇಳುತ್ತಾರೆ ಎಂದರೆ ಸರಿ. ರೋಗಿಗೆ ಒಂದು ವೇಳೆ ಮಾತನಾಡಲು ಆಗದಿದ್ದರೆ ಅವರ ಜೊತೆ ಬಂದವರನ್ನು ಹೇಗೆ ಆಯಿತು ಏನಕ್ಕೆ ಆಯಿತು ಎಂದು ಮಾಹಿತಿ ಕೇಳುತ್ತಾರೆ ಎಂದರೆ ಸರಿ. ಏನು ಏನು ಆಗಿದೆ ಅಂತಾ ಕೇಸ ಶೀಟನಲ್ಲಿ ಬರೆದುಕೊಂಡು ಚಿಕಿತ್ಸೆ ಕೊಡುತ್ತಾರೆ ಎಂದರೆ ಸರಿ. ಅವರಿಗೆ ನೀಗುವ ಹಾಗಿದ್ದರೆ ಚಿಕಿತ್ಸೆ ಕೊಡುತ್ತಾರೆ ಇಲ್ಲದಿದ್ದರೆ ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳುತ್ತಾರೆ ಎಂದರೆ ಸರಿ. ನಮ್ಮ ಊರಿನ ಪಕ್ಕ ಹೆಬ್ಬಳ್ಳಿಯಲ್ಲಿ ಡಾ. ಆಲೂರ ಅಂತಾ ಇದ್ದಾರೆ. ಮೃತ ಮಲ್ಲಿಕಾರ್ಜುನನ್ನು ಮೊದಲಿಗೆ ಆಲೂರ ವೈದ್ಯರ ಹತ್ತಿರ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿ. ಈ ಪ್ರಕರಣದಲ್ಲಿ ಆಲೂರ ಇವರ ಸಾಕ್ಷ್ಯ ಆಗಿರುವುದು ಗೊತ್ತಿಲ್ಲ. ನಾನು ಹಾಗೂ ಗುರುಸಿದ್ದಪ್ಪ ಹೊಳೆಪ್ಪನವರ ಮೃತ ಮಲ್ಲಿಕಾರ್ಜುನನ್ನು ಆಲೂರ ವೈದ್ಯರ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದೆವು. ನಾನು ಹೋಗಿದ್ದರ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ದವಾಖಾನೆಗೆ ಹೋದಾಗ ಮೃತ ಮಲ್ಲಿಕಾರ್ಜುನ ಇವರನ್ನು ಕೇಳಿ ವೈದ್ಯರು ಚಿಕಿತ್ಸೆ ನೀಡಿದರು ಎಂದರೆ ಸರಿ. ಆತನಿಗೆ ಏನು ಆಗಿದೆ ಅಂತಾ ಎಲ್ಲಾ ಕೇಸ ಶೀಟನಲ್ಲಿ ಬರೆದುಕೊಂಡು ಹೆಚ್ಚಿನ ಚಿಕಿತ್ಸೆ ಸಲುವಾಗಿ ಎಸ್ ಡಿ ಎಮ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು ಎಂದರೆ ಸರಿ. ಮೆಡಿಕಲ್ ದಾಖಲಾತಿಗಳ ಪ್ರಕಾರ ಮೃತ ಮಲ್ಲಿಕಾರ್ಜುನ ಮನೆಯಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು accident ಆಗಿತ್ತು ಎಂದು ನುಡಿಯುತ್ತಾರೆ. ನಾನು ಹೇಳುವ ಅಪಘಾತ ಆಗಿದೆ ಎನ್ನುವ ಬಗ್ಗೆ ಪೊಲಿಸರ ಮುಂದೆ ದಿಃ 11.09.2016 ರಂದು ಹೇಳಿಕೆ ಕೊಟ್ಟಿದ್ದೇನೆ. ಆಲೂರ ವೈದ್ಯರ ಬಳಿ ಕರೆದುಕೊಂಡು ಹೋಗಿದ್ದೆವು ಅಂತಾ

ಪೊಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಮೃತ ಮಲ್ಲಿಕಾರ್ಜುನ ನನ್ನ ಹತ್ತಿರದ ಸಂಬಂಧಿ ಎಂದರೆ ಸರಿಯಲ್ಲ. ನಾನು ಮತ್ತು ಮೃತ ಮಲ್ಲಿಕಾರ್ಜುನ ಒಂದೇ ಜಾತಿಯವರು. ನಾನು ಅವರ ವಾರ್ಡನ ಮೆಂಬರ ಆಗಿದ್ದೆ. ಮೃತ ಮಲ್ಲಿಕಾರ್ಜುನ ನನ್ನ ಸಪೊರ್ಟರ್ ಆಗಿದ್ದ ಎಂದರೆ ಸರಿಯಲ್ಲ. ಮೃತ ಮಲ್ಲಿಕಾರ್ಜುನ ಈತ ಮನೆಯಲ್ಲಿ ಬಿದ್ದು ಸತ್ತಿರುವ ವಿಚಾರ ಗೊತ್ತಿದ್ದರೂ ಸಹ ಆತ ನಮ್ಮ ಜಾತಿಯವ ಹಾಗೂ ಸಪೊರ್ಟರ್ ಆಗಿರುವುದರಿಂದ ಅವರ ಮನೆಯವರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಯಾವ ಅಪಘಾತನು ಆಗಿಲ್ಲ. ಗಾಡಿಯೂ ಸಹ ಅಪಘಾತದಲ್ಲಿ ಬಾಗಿಯಾಗಿಲ್ಲ ನಾವೆಲ್ಲ ರಾಜಕಾರಣಿಗಳು ಒಂದಾಗಿ ಈ ರೀತಿ ಸುಳ್ಳು ಪ್ರಕರಣ ಹಾಕಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ವೈಯಕ್ತಿಕವಾಗಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.